# ಬ್ಲ್ಯಾಕ್ ಫಂಗಸ್



■ ಬಸು ಬೇವಿನಗಿಡದ
ಕಲೆ: ಎಸ್‌ವಿ. ಹೂಗಾರ

ಮುಗಿಯಲಾರದ ಮಾತು ಹೇಳುತ್ತಿದ್ದ ಬಸವರಾಜ ಈಗ ಮಾತಿಲ್ಲದೆ ಮಲಗಿದ್ದಾನೆ. ಆತನಲ್ಲೀಗ ಉಸಿರಿಲ್ಲವೆಂದರೆ ನಂಬುವುದು ಹೇಗೆ? ಮೊನ್ನೆ, ಆಚೆಮೊನ್ನೆ ಅಷ್ಟೇಕೆ ನಿನ್ನೆ ಸಂಜೆ ಕೂಡ ನಮ್ಮೊಂದಿಗೆ ಮಾತಾಡಿದ್ದ ಅವನು ಈಗ ಮರಣ ಹೊಂದಿದ್ದಾನೆ ಎಂದರೆ ಏನು ಹೇಳುವುದು? ಹೌದು! ಸಂಕಟದ ಈ ಕಾಲಘಟ್ಟದಲ್ಲಿ ಒಬ್ಬರು ಮತ್ತೊಬ್ಬರಿಗೆ ಏನು ಹೇಳುವುದು ಹಾಗೂ ಏನು ಕೇಳುವುದು ಎಂದೇ ಎಲ್ಲರಿಗೆ ಅನಿಸಿಬಿಟ್ಟಿದೆ. ಮನುಷ್ಯರಿಗೆ ಆಘಾತಗಳು ಹೀಗೆ ಒದಗಿಬರುತ್ತವೆಯೆಂದು ನಾನು ತಿಳಿದಿರಲಿಲ್ಲ. ನಾನೊಬ್ಬನೇ ಏಕೆ? ಜಗತ್ತಿನ ಕೋಟ್ಯಂತರ ಮಂದಿಗೆ ಅದು ತಿಳಿಯಲಾರದು. ಕಣ್ಣಿಗೆ ಕಾಣದ ಸೂಕ್ಷ್ಮಜೀವಿಯೊಂದು ಇಷ್ಟೆಲ್ಲ ಅವಾಂತರವನ್ನು ಹುಟ್ಟುಹಾಕುತ್ತದೆಯೆಂದು ಯಾರು ತಿಳಿದಿದ್ದರು? ಯಾರು ತಿಳಿದಿದ್ದರು ಹೀಗೆ ಒಂದು ದಿನ ಲೋಕವ್ಯವಹಾರಗಳನ್ನು ಅತಿಸಣ್ಣ ವೈರಸ್‌ವೊಂದು ಭಯಂಕರವೆನಿಸುವ ತನ್ನ ಪಾಶದಿಂದ ಬಂಧಿಸಿ ಇಡುತ್ತದೆಯೆಂದು?

ವೈರಸ್ ಎಂದರೆ ನಮಗೆ ಇಷ್ಟುದಿನ ಹೆಚ್ಚಾಗಿ ಕಂಪ್ಯೂಟರ್ ವೈರಸ್ ಎಂದು ಮಾತ್ರ ಗೊತ್ತಿತ್ತು. ಕಂಪ್ಯೂಟರ್‌ನಲ್ಲಿ ಸಂಗ್ರಹಿಸಲಾಗಿರುವ ಮಾಹಿತಿಯನ್ನು ಕೆಡಿಸಲು ಇಲ್ಲವೆ ಕದಿಯಲು ವೈರಸ್‌ಗಳು ಬಂದು ಅವಿತುಕೊಳ್ಳುವುದು ತಿಳಿದಿತ್ತು. ತಾಣಗಳು ಹ್ಯಾಕ್ ಆಗುವುದು, ಅಂತರ್ಜಾಲ ಒಮ್ಮೆಲೆ ಬಿದ್ದುಹೋಗುವುದು, ಫೈಲ್ ಕಳೆದುಹೋಗುವುದು, ಗೌಪ್ಯ ಮಾಹಿತಿ ಸೋರಿಕೆಯಾಗುವುದು ಹೀಗೆ ನೂರೆಂಟು ವೈರಸ್‌ಗಳು ನಮ್ಮ ರಕ್ಷಣಾಕವಚಗಳನ್ನು ಭೇದಿಸಿ ನಾವು ನಂಬಿ ಕೆಲಸ ಮಾಡುವ ವ್ಯವಸ್ಥೆಯನ್ನು ಭೇದಿಸಿದವು. ಫೈಲ್ ಇನ್‌ಫೆಕ್ಟರ್, ಬೂಟ್ ಸೆಕ್ಟರ್ ಅಬ್ಬಬ್ಬಾ! ಅವುಗಳ ಹೆಸರು ಕೇಳಿದರೆ ಸಾಕು, ಮೈನಡುಕ ಉಂಟಾಗುತ್ತಿತ್ತು. ಅವು ಎಲ್ಲೆಲ್ಲೂ ಅಡಗಿಕುಳಿತು ನಮ್ಮ ಕವಚವನ್ನು ಬಟಾಬಯಲು ಮಾಡುತ್ತವೆ. ಅವುಗಳಿಗೆ ನಮ್ಮ ಎಲ್ಲ ತಾಣಗಳು ಅಡಗುದಾಣಗಳೆ ಆಗಿವೆ. ಈ ವೈರಸ್‌ಗಳನ್ನು ಸಾವಿನ ಸಂದೂಕಕ್ಕೆ ಹಾಕುವ ಆಂಟಿ ವೈರಸ್‌ಗಳೆಂಬ ಸುದರ್ಶನ ಚಕ್ರಗಳನ್ನು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ವಿಜ್ಞಾನಿಗಳು ಕಂಡುಹಿಡಿದಾಗ ಉಸ್ಸೆಪಾ ಎಂದು ನಾವು ನಿಟ್ಟುಸಿರುಬಿಟ್ಟೆವು. ಅದು ಒಂದು ಪಟ್ಟು ಹಾಕಿದರೆ ಅದರ ವಿರುದ್ಧದ ಹತ್ತುಪಟ್ಟುಗಳನ್ನು ಹಾಕುವ ಕಲೆಯನ್ನು ನಾವು ಕರಗತ ಮಾಡಿಕೊಂಡು ಬೀಗಿದೆವು. ಹೇಗಿದ್ದರೂ ಆಂಟಿವೈರಸ್ ಹಾಕಿದ್ದೇವಲ್ಲ, ಇನ್ನೇನು ಕಂಪ್ಯೂಟರ್‌ನಿಂದ ನಾವು ಮಾಡುವ ಕೆಲಸಗಳು ಸುರಕ್ಷಿತವೆಂದು ನೆಮ್ಮದಿಯಾಗಿರುವ ಹೊತ್ತಿನಲ್ಲಿ ಕೊರೊನಾ ಎನ್ನುವ ಹೊಸ ವೈರಸ್ ಜವರಾಯನ ರೆಕ್ಕೆ ಕಟ್ಟಿಕೊಂಡು ಹಾರುತ್ತ ನಮ್ಮ ದೇಹದೊಳಗೆ ಪ್ರವೇಶಿಸಲು ಯತ್ನಿಸಬೇಕೆ? ಈ ವೈರಸ್‌ನ್ನು ಅನೇಕ ವ್ಯಾಕ್ಸಿನ್ ಶೀಲ್ಡ್‌ಗಳಿಂದ ಸದೆ ಬಡಿಯಲಾಗುತ್ತಿದ್ದರೂ ಅದು ತನ್ನ ಪಳೆಯುಳಿಕೆಗಳನ್ನು ಒಂದು, ಎರಡು, ಮೂರು ಎಂದು ಬಿಡುತ್ತಲೆ ಇದೆ. ಗಂಟಲನ್ನು ಹರಿದು ತಿನ್ನುವ, ದೇಹದ ಉಸಿರಿನ ಚೀಲಗಳನ್ನು ಮುದ್ದೆ ಮಾಡುವ ಈ ಅಪಾಯಕಾರಿ ರೋಗಾಣು ಎಲ್ಲಿಂದ ಬಂದಿತೋ, ಎಲ್ಲಿ ಹುಟ್ಟಿಕೊಂಡಿತೋ, ಅದ್ಹೇಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಮಗೆ ತಿಳಿಯದಂತೆ ಚಲಿಸುತ್ತದೆಯೋ ತಿಳಿಯುವುದಿಲ್ಲ. ಇದರ ಬಗ್ಗೆ ತಿಳಿದುಕೊಂಡಷ್ಟೂ ಭಯಾನಕವೆನಿಸುವ ಅದರ ಕರಿನೆರಳು ನಮ್ಮನ್ನು ಆವರಿಸಿಕೊಳ್ಳುತ್ತಲೆ ಇದೆ. ವೈರಸ್ಸಿನ ನೆರಳು ನಿಜದ ಅರ್ಥದಲ್ಲಿ ಕರಿನೆರಳನ್ನೆ ಬಿಡುತ್ತಿದೆ. ಅದೇನೋ ಬ್ಲ್ಯಾಕ್ ಫಂಗಸ್, ವೈಟ್ ಫಂಗಸ್ ಎಂದೆಲ್ಲ ಅಡ್ಡಪರಿಣಾಮಗಳು ಬೇರೆ ಕಾಣಿಸಿಕೊಂಡು ಕರೋನಾ ನಮ್ಮ ಜೀವನಕ್ಕೆ ಎಷ್ಟೆಲ್ಲ ರೀತಿಯಲ್ಲಿ ಬೂಷ್ಟು ಹಿಡಿಸುವಲ್ಲಿ ನಿರತವಾಗಿದೆ ಎಂದು ಆಲೋಚಿಸಿದಾಗ ಮೈಜುಮ್ಮೆನ್ನುತ್ತದೆ! ನಾಯಿಕೊಡೆಯಂತೆ ಅದು ಒಳಗೂ ಹೊರಗೂ ಆತಂಕದ ಅಡ್ಡಪೈರನ್ನು ಹುಟ್ಟುಹಾಕುತ್ತಿದೆ!